## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1323 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 16.03.2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಯುವಕರು, ಮಹಿಳೆಯರು, ಸ್ವಸಹಾಯ ಸಂಘಗಳು, ಗ್ರಾಮೀಣ ನಿರುದ್ಯೋಗಿಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಜಾರಿಗೊಳಿಸಿರುವ ಕೇಂದ್ರ ಪ್ರಾಯೋಜಿತ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಯಾವುವು; ಅವುಗಳ ಉದ್ದೇಶ, ಗುರಿ ಏನು; ಫಲಾನುಭವಿಗಳ ಸಂಖ್ಯೆ ಎಷ್ಟು; ಅರ್ಹತಾ ಮಾನದಂಡಗಳೇನು; | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಕರ್ನಾಟಕ ಸರ್ಕಾರದ ಐದು ಖಾತರಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯು ರಾಜ್ಯದ ನಿರುದ್ಯೋಗಿ ಯುವಕ/ ಯುವತಿಯರಿಗೆ ನಿರುದ್ಯೋಗ ಭತ್ಯೆಯನ್ನು ನೀಡಿ ಸಬಲೀಕರಣಗೊಳಿಸಲು ಜಾರಿಗೊಳಿಸಿರುವ ಮಹತ್ತರ ಯೋಜನೆಯಾಗಿರುತ್ತದೆ. ಸದರಿ ಯೋಜನೆಯನ್ನು ದಿನಾಂಕ:26-12-2023 ರಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯ ಮಾನದಂಡಗಳು ಈ ಕೆಳಗಿನಂತಿವೆ:-<br>**1. ಅರ್ಹತೆ:-**<br>• 2023, 2024, 2025 ಹಾಗೂ 2026 ರಲ್ಲಿ ತೇರ್ಗಡೆ ಹೊಂದಿ 180 ದಿನಗಳ ನಂತರವೂ ಉದ್ಯೋಗ ದೊರಕದೇ ಅಥವಾ ಉನ್ನತ ವ್ಯಾಸಂಗಕ್ಕೆ ದಾಖಲಾಗದಿರುವ ಅಭ್ಯರ್ಥಿಗಳು.<br>• ಕನಿಷ್ಟ 6 ವರ್ಷ ಕರ್ನಾಟಕದಲ್ಲಿ ವಾಸವಿದ್ದು, ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಅಧ್ಯಯನ ಮಾಡಿದವರು.<br>**2. ಅನರ್ಹತೆಗಳು:-**<br>• ಸರ್ಕಾರಿ/ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ದಲ್ಲಿರುವ ಅಭ್ಯರ್ಥಿಗಳು.<br>• ಸ್ವಯಂ ಉದ್ಯೋಗದಲ್ಲಿರುವ ಅಭ್ಯರ್ಥಿಗಳು.<br>• ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿರುವ ಅಭ್ಯರ್ಥಿಗಳು.<br>ರಾಜ್ಯದಲ್ಲಿ ಯುವನಿಧಿ ಯೋಜನೆ ಅಡಿ ದಿ:13-03-2026 ರ ಅಂತ್ಯಕ್ಕೆ ಒಟ್ಟು 4,13,329 ಅಭ್ಯರ್ಥಿಗಳು ನೋಂದಾಯಿಸಿದ್ದು, ಅವರುಗಳಲ್ಲಿ 3,08,267 ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ. |

**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯಾದ್ಯಂತ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸುವ ಮುಖೇನ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿರುತ್ತದೆ. ಅದರಂತೆ, ಈ ಕೆಳಕಂಡಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

**ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ :**

- ಯುವನಿಧಿ ಪ್ಲಸ್ ಕಾರ್ಯಕ್ರಮ-ILC & Future Skills ಕಾರ್ಯಕ್ರಮ ಮತ್ತು ಖಾಸಗಿ ತರಬೇತಿ ಸಂಸ್ಥೆಗಳಿಂದ ತರಬೇತಿ ಕಾರ್ಯಕ್ರಮ
- ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮ
- ಅಳಿವಿನಂಚಿನಲ್ಲಿರುವ ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯ ತರಬೇತಿ
- ಲಂಬಾಣಿ ಕಸೂತಿ ಕಲೆಯ ತರಬೇತಿ

(ಯೋಜನೆಗಳ ವಿವರವನ್ನು ಅನುಬಂಧ -1 ರಲ್ಲಿ ನೀಡಿದೆ)

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ GO No. SDEL 179 SSM 2021 ದಿನಾಂಕ: 20.09.2021 ರನ್ವಯ ಪ್ರಸ್ತುತ ಮಾನದಂಡವನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 69 ಕೌಗುಇ 2025 ದಿನಾಂಕ:13.02.2026 ರಂತೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ 2.0 ಜಾರಿಯಾಗಿದ್ದು, ಅದರ ನಿಯಮಗಳನ್ನು ಅನುಸರಿಸಲಾಗುತ್ತಿದೆ.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)**

- ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರು ಡೇ-ಎನ್‌ಯುಎಲ್‌ಎಂ ಅಭಿಯಾನವನ್ನು ದಿ:01.10.2022 ರಿಂದ ಪ್ರತಿ 06 ತಿಂಗಳಿಗೊಮ್ಮೆ ದಿ:30.09.2024 ರವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.
- ಮುಂದುವರೆದು, ಡೇ-ಎನ್‌ಯುಎಲ್‌ಎಂ ಅಭಿಯಾನವು ದಿ:30.09.2024 ರ ಅಂತ್ಯಕ್ಕೆ ಮುಕ್ತಾಯಗೊಂಡಿರುತ್ತದೆ.
- ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರ ಪತ್ರ ಸಂಖ್ಯೆ: K-11013(8) /1/2021-UPA-I-UD-Part(1)/E-9126071 ದಿ:04.12.2024 ರನ್ವಯ ಹೊಸ ಯೋಜನೆಯಾದ ದೀನದಯಾಳ್ ಜನ್ ಆಜೀವಿಕ (ಶಹರಿ) ಯೋಜನೆಯನ್ನು (DJAY-S) ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಿರುತ್ತದೆ. ಸದರಿ ಯೋಜನೆಯನ್ನು 30.09.2025 ರವರೆಗೆ ಮುಂದುವರೆಸಲಾಗಿರುತ್ತದೆ. ಅದರಂತೆ ಕೇಂದ್ರ ಸರ್ಕಾರದಿಂದ ಕರಡು ಮಾರ್ಗಸೂಚಿಯು ಮಾತ್ರ ಸ್ವೀಕೃತವಾಗಿದ್ದು, ಅನುದಾನ ಮತ್ತು ಭೌತಿಕ ಗುರಿ ಸ್ವೀಕೃತವಾಗಿರುವುದಿಲ್ಲ.
- ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ

ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳಿಗೆ ಮೊದಲನೇ ಹಂತದಲ್ಲಿ ರೂ.15000/- ಎರಡನೇ ಹಂತದಲ್ಲಿ ರೂ. 25000/- ಮತ್ತು ಮೂರನೇ ಹಂತದಲ್ಲಿ ರೂ.50000/- ಗಳ ವರೆಗೆ ಶೇ 7 ರಷ್ಟು ಬಡ್ಡಿ ಸಹಾಯ ಧನದೊಂದಿಗೆ ಕಿರು ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

**<u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u>**

ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯಡಿ ಕಳೆದ 3 ವರ್ಷಗಳಲ್ಲಿ ಯುವಕರು, ಮಹಿಳೆಯರು, ಸ್ವ-ಸಹಾಯ ಸಂಘಗಳು, ಗ್ರಾಮೀಣ ನಿರುದ್ಯೋಗಿಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಜಾರಿಗೊಳಿಸಿರುವ ಕೇಂದ್ರ ಪ್ರಾಯೋಜಿತ ರಾಜ್ಯದಲ್ಲಿ ಕೈಗೊಳ್ಳಲಾದ ಯೋಜನೆಗಳು ಈ ಕೆಳಕಂಡಂತಿದೆ.

1. **<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):</u>**
   ರಾಜ್ಯದ 238 ತಾಲ್ಲೂಕುಗಳಲ್ಲಿ ಗ್ರಾಮೀಣ ಬಡತನವನ್ನು ಕಡಿಮೆ ಮಾಡಲು ಗ್ರಾಮೀಣ ಮಹಿಳಾ ಬಡತನ ರೇಖೆಯ ಮಹಿಳೆಯರನ್ನು ಸ್ವ-ಸಹಾಯ ಗುಂಪಿನಡಿ ಸಂಘಟಿಸುವ ಮೂಲಕ ಜೀವನೋಪಾಯ ಸ್ವ-ಉದ್ಯೋಗಗಳನ್ನು ಕಲ್ಪಿಸುವ ಉದ್ದೇಶ, ಗುರಿಯಿಂದ ಗ್ರಾಮೀಣ ಭಾಗದ ಎಲ್ಲಾ ಕುಟುಂಬದಿಂದ ಓರ್ವ ಅರ್ಹ ಮಹಿಳೆಯನ್ನು ಸ್ವ-ಸಹಾಯ ಗುಂಪಿಗೆ ಸೇರಿಸಿ ಅವರಿಗೆ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**<u>ಅರ್ಹತಾ ಮಾನದಂಡಗಳು :</u>**

- ಗ್ರಾಮೀಣ ಅರ್ಹ ಬಡ ಕುಟುಂಬಕ್ಕೆ ಸೇರಿದ ಮಹಿಳೆಯರಾಗಿರಬೇಕು.
- ಒಂದು ಗುಂಪಿನಲ್ಲಿ 10 ರಿಂದ 20 ಸದಸ್ಯರು ಇರಬೇಕು. (ವಿಶೇಷ ಗುಂಪುಗಳಲ್ಲಿ ಕನಿಷ್ಠ 5 ಸದಸ್ಯರು ಇರಬಹುದು).
- ಒಂದು ಕುಟುಂಬದಿಂದ ಒಬ್ಬ ಸದಸ್ಯ ಮಾತ್ರ SHG ಸದಸ್ಯರಾಗಲು ಅವಕಾಶವಿರುತ್ತದೆ.
- ಸದಸ್ಯರು ಒಂದೇ ಗ್ರಾಮ / ಹಳ್ಳಿ ಅಥವಾ ಸಮೀಪದ ವಾಸಸ್ಥಳದವರಾಗಿರಬೇಕು.
- ಸದಸ್ಯರು ನಿಯಮಿತವಾಗಿ ಉಳಿತಾಯ ಮಾಡಲು ಮತ್ತು ಸಭೆಗಳಲ್ಲಿ ಭಾಗವಹಿಸಲು ಸಿದ್ಧರಾಗಿರಬೇಕು.

| | | |
|---|---|---|
| | | • ಸದಸ್ಯರು ಪರಸ್ಪರ ವಿಶ್ವಾಸ, ಒಗ್ಗಟ್ಟು ಮತ್ತು ಹೊಣೆಗಾರಿಕೆ ಹೊಂದಿರಬೇಕು.<br>• ಬ್ಯಾಂಕ್ ಖಾತೆ ತೆರೆಯಲು ಹಾಗೂ ಸಾಲ ಚಟುವಟಿಕೆಗಳಲ್ಲಿ ಭಾಗವಹಿಸಲು ಸಿದ್ಧರಾಗಿರಬೇಕು.<br>**<u>ಫಲಾನುಭವಿಗಳ ಸಂಖ್ಯೆ:</u>**<br>• ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಕಳೆದ 3 ವರ್ಷಗಳಲ್ಲಿ 1,80,517 ಸ್ವ-ಸಹಾಯ ಗುಂಪುಗಳಡಿ 13,46,047 ಕುಟುಂಬಗಳನ್ನು ಅಭಿಯಾನ ವ್ಯಾಪ್ತಿಗೆ ತರಲಾಗಿದ್ದು, ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಹಾಗೂ ಜೀವನೋಪಾಯ ಚಟುವಟಿಕೆ ಕೈಗೊಳ್ಳಲು ಸಮುದಾಯ ಬಂಡವಾಳ ನಿಧಿ, ಸುತ್ತುನಿಧಿ, ಬ್ಯಾಂಕ್‌ಲಿಂಕೇಜ್ ಸಾಲ ಸೌಲಭ್ಯಗಳೊಂದಿಗೆ ಲಿಂಗತ್ವ, ಆಹಾರ, ಪೌಷ್ಠಿಕತೆ, ಆರೋಗ್ಯ ಮತ್ತು ನೈರ್ಮಲ್ಯ ಕುರಿತಾದ ಸೇವೆಗಳು ಮಾರ್ಗಸೂಚಿಗಳಂತೆ ಒದಗಿಸಲಾಗುತ್ತಿದೆ.<br>2. **<u>ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY):</u>**<br>• ಗ್ರಾಮಾಂತರ ಪ್ರದೇಶದಲ್ಲಿನ 18 ರಿಂದ 35 ವಯೋಮಾನದ ನಿರುದ್ಯೋಗಿ ಯುವಕ/ಯುವತಿಯರಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಿ ವೇತನಾಧಾರಿತ ಉದ್ಯೋಗ ಕಲ್ಪಿಸುವ ಮುಖ್ಯ ಉದ್ದೇಶದಿಂದ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br>**<u>ಅರ್ಹತಾ ಮಾನದಂಡಗಳು :</u>**<br>• 18 ರಿಂದ 35 ವರ್ಷ ವಯಸ್ಸಿನ ಗ್ರಾಮೀಣ ಯುವಕರು / ಯುವಕ ಯುವತಿಯರಾಗಿರಬೇಕು.<br>**<u>ಫಲಾನುಭವಿಗಳ ಸಂಖ್ಯೆ:</u>**<br>• ಕಳೆದ 3 ವರ್ಷಗಳಲ್ಲಿ 6463 ವಿವಿಧ ಕೌಶಲ್ಯ ತರಬೇತಿಗಳನ್ನು ಪಡೆದಿದ್ದು 4270 ಅಭ್ಯರ್ಥಿಗಳಿಗೆ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗಿರುತ್ತದೆ<br>3. **<u>ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ ಯೋಜನೆ (RSETI):</u>**<br>• ಗ್ರಾಮಾಂತರ ಪ್ರದೇಶದಲ್ಲಿನ 18 ರಿಂದ 50 ವಯೋಮಾನದ ನಿರುದ್ಯೋಗಿ ಯುವಕ/ಯುವತಿಯರಿಗೆ ವಿವಿಧ ವೃತ್ತಿಗಳಡಿ ತರಬೇತಿಗಳನ್ನು ನೀಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಬೆಂಬಲಿಸುವ ಉದ್ದೇಶದೊಂದಿಗೆ ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಪ್ರಸ್ತುತ 32 ಕೇಂದ್ರಗಳ ಸಹಯೋಗದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| | | **ಅರ್ಹತಾ ಮಾನದಂಡಗಳು :**<br>• 18 ರಿಂದ 50 ವರ್ಷ ವಯೋಮಾನದವರಿರಬೇಕು.<br>• ಗ್ರಾಮೀಣ ಭಾಗದವರಾಗಿದ್ದು, ಓದುಬರಹ ತಿಳಿದಿರಬೇಕು.<br>• ಬಿಪಿಎಲ್ ಕಾರ್ಡ್‌ದಾರರಾಗಿರಬೇಕು<br>• ಕಂಪ್ಯೂಟರ್ ತರಬೇತಿಗೆ ಕನಿಷ್ಠ ಪಿಯುಸಿ ವಿದ್ಯಾರ್ಹತೆ ಹೊಂದಿರಬೇಕು.<br>**ಫಲಾನುಭವಿಗಳ ಸಂಖ್ಯೆ:**<br>• ಕಳೆದ 3 ವರ್ಷಗಳಲ್ಲಿ 76,227ವಿವಿಧ ಕೌಶಲ್ಯ ತರಬೇತಿಗಳನ್ನು ಪಡೆದಿದ್ದು, 56,615 ಅಭ್ಯರ್ಥಿಗಳಿಗೆ ಸ್ವ-ಉದ್ಯೋಗವನ್ನು ಹೊಂದಿರುತ್ತಾರೆ.<br>4. **ಆರಂಭಿಕ ಗ್ರಾಮೀಣ ಉದ್ಯಮ ಕಾರ್ಯಕ್ರಮ (SVEP):**<br>ಗ್ರಾಮೀಣ ಮಹಿಳೆಯರು ಮಹಿಳೆಯರು ಉದ್ಯಮ ಚಟುವಟಿಕೆ ಕೈಗೊಳ್ಳಲು ಕೈಗೊಂಡಿರುವ ಉದ್ಯಮ ಚಟುವಟಿಕೆಗಳನ್ನು ಮೇಲ್ದರ್ಜೆಗೇರಿಸಲು ಸೂಕ್ತ ತರಬೇತಿ ಹಾಗೂ ಇತರೆ ಪೂರಕ ವ್ಯವಸ್ಥೆ, ಉದ್ಯಮ ಬಂಡವಾಳ ನಿಧಿ ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಪ್ರಸ್ತುತ 4 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು 4 ವರ್ಷದ ಅವಧಿಯನ್ನು ಹೊಂದಿರುತ್ತದೆ.<br>**ಅರ್ಹತಾ ಮಾನದಂಡಗಳು :**<br>• ಸ್ವ-ಸಹಾಯ ಗುಂಪಿನ ಸದಸ್ಯರಾಗಿರಬೇಕು.<br>**ಫಲಾನುಭವಿಗಳ ಸಂಖ್ಯೆ:**<br>• ಕಳೆದ 3 ವರ್ಷಗಳಲ್ಲಿ ನಾಲ್ಕು ತಾಲ್ಲೂಕುಗಳಾದ ಟಿ.ನರಸೀಪುರ, ದೇವನಹಳ್ಳಿ, ಕೊಪ್ಪಳ, ಬೆಂಗಳೂರು (ದಕ್ಷಿಣ)ಗಳಲ್ಲಿ ಒಟ್ಟು 4013 ಸ್ವ-ಸಹಾಯ ಗುಂಪಿನ ಮಹಿಳೆಯರು ಕಿರು ಉದ್ಯಮ ಚಟುವಟಿಕೆಗಳನ್ನು ಕೈಗೊಂಡಿರುತ್ತಾರೆ.<br>5. **ಮಹಿಳಾ ಸಶಕ್ತೀಕರಣ ಪರಿಯೋಜನ-ಸಮಗ್ರ ಕೃಷಿ ಸಮೂಹ (MKSP-IFC):**<br>• ರಾಜ್ಯದ 30 ಜಿಲ್ಲೆಗಳ (ಬೆಂಗಳೂರು ನಗರ ಹೊರತುಪಡಿಸಿ) ಪ್ರತಿ ತಾಲ್ಲೂಕಿಗೆ ಸರಾಸರಿ 3 ಕ್ಲಸ್ಟರ್‌ಗಳಂತೆ 682 ಕ್ಲಸ್ಟರ್‌ಗಳಲ್ಲಿ ರೈತ ಮಹಿಳೆಯರಿಗೆ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನ, ವ್ಯಾಪಾರ ಯೋಜನಾ ತಯಾರಿಕೆ ಮುಂತಾದ ಚಟುವಟಿಕೆಗಳಿಗೆ ಬೆಂಬಲ ಒದಗಿಸುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br>**ಅರ್ಹತಾ ಮಾನದಂಡಗಳು :**<br>• ಸ್ವ-ಸಹಾಯ ಗುಂಪಿನ ಸದಸ್ಯರಾಗಿರಬೇಕು. |

**<u>ಫಲಾನುಭವಿಗಳ ಸಂಖ್ಯೆ:</u>**

- ಕಳೆದ 3 ವರ್ಷಗಳಲ್ಲಿ 200400 ಮಹಿಳಾ ಕಿಸಾನ್ ಫಲಾನುಭವಿಗಳು ಯೋಜನೆಯಡಿ ಪ್ರಯೋಜನ ಪಡೆಯುತ್ತಿದ್ದಾರೆ.

6. <u>ನಾರಿ ಕರ್ನಾಟಕ ಸಮಗ್ರ ಜೀವನೋಪಾಯ ಯೋಜನೆ - (NARI-KILP) :</u>

- ರಾಜ್ಯದಲ್ಲಿ 2024-25ನೇ ಸಾಲಿನಿಂದ ಪ್ರಸ್ತುತ ಸ್ವ-ಸಹಾಯ ಗುಂಪುಗಳಿಂದ ಹಾಗೂ ಸರ್ಕಾರದ ಸೇವಾ ಸೌಲಭ್ಯಗಳಿಂದ ಹೊರಗುಳಿದ ಅತೀ ದುರ್ಬಲ ಕುಟುಂಬಗಳನ್ನು ಗುರುತಿಸಿ ಅವರನ್ನು ಸ್ವ-ಸಹಾಯ ಗುಂಪಿನ ಸದಸ್ಯರನ್ನಾಗಿ ಅಭಿಯಾನದ ವ್ಯಾಪ್ತಿಗೆ ತರುವುದು ಮತ್ತು ಮೂಲ ಅವಶ್ಯಕ ದಾಖಲೆಗಳು ಸೇರಿದಂತೆ ಅರ್ಹತೆಗನುಗುಣವಾಗಿ ಸರ್ಕಾರದ ಸೇವಾ-ಸೌಲಭ್ಯಗಳು, ಸುಸ್ಥಿರ ಜೀವನೋಪಾಯ ಚಟುವಟಿಕೆಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ಜಾರಿಗೊಳಿಸಲಾಗುತ್ತಿರುವ ವಿಶೇಷ ಯೋಜನೆಯಾಗಿದೆ. ಸದರಿ ಯೋಜನೆಯನ್ನು ರಾಜ್ಯದ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳು ಮತ್ತು ಬಾಗಲಕೋಟೆ, ವಿಜಯಪುರ, ಚಾಮರಾಜನಗರ ಜಿಲ್ಲೆಗಳಲ್ಲಿ ತಲಾ 2 ತಾಲ್ಲೂಕುಗಳಂತೆ ಒಟ್ಟು 20 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**<u>ಅರ್ಹತಾ ಮಾನದಂಡಗಳು :</u>**

- ಪ್ರಸ್ತುತ ಸ್ವ-ಸಹಾಯ ಗುಂಪುಗಳಿಂದ ಹಾಗೂ ಸರ್ಕಾರದ ಸೇವಾ ಸೌಲಭ್ಯಗಳಿಂದ ಹೊರಗುಳಿದ ಅತೀ ದುರ್ಬಲ ಕುಟುಂಬಗಳು.

6. <u>ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (NRETP)</u> :

(ಈ ಯೋಜನೆಯು 2024 ಜೂನ್ 30ಕ್ಕೆ ಕೇಂದ್ರ ಸರ್ಕಾರವು ಮುಕ್ತಾಯಗೊಳಿಸಿರುತ್ತದೆ).

**<u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)</u>**

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ರಾಜ್ಯ ಸರ್ಕಾರದ ಅನುದಾನದಲ್ಲಿ ಈ ಕೆಳಕಂಡ ತರಬೇತಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು.
2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು.
3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ಅನುಷ್ಠಾನಗೊಳಿಸಲಾಗುತ್ತಿರುವ ತರಬೇತಿಗಳನ್ನು ಸ್ವಂತ ಉದ್ಯಮ ಮಾಡಲು ಬಯಸುವ

<table>
<tr>
<td></td>
<td></td>
<td>ಆಸಕ್ತರಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ಉದ್ಯಮಶೀಲತಾಭಿವೃದ್ಧಿ ತರಬೇತಿಗೆ ಭಾಗವಹಿಸುವವರ ಕನಿಷ್ಠ ವಯಸ್ಸು 18 ವರ್ಷವಾಗಿರಬೇಕು.</td>
</tr>
<tr>
<td>(ಆ)</td>
<td>ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಪ್ರತಿ ಯೋಜನೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಅದರಲ್ಲಿ ವಾಸ್ತವವಾಗಿ ಎಷ್ಟು ಮೊತ್ತ ಬಿಡುಗಡೆಯಾಗಿದೆ ಮತ್ತು ಎಷ್ಟು ಖರ್ಚಾಗಿದೆ ಜಿಲ್ಲಾವಾರು ಮಾಹಿತಿ ನೀಡುವುದು;</td>
<td><u>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ</u><br><br>ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಯುವನಿಧಿ ಯೋಜನೆಯಗೆ ರಾಜ್ಯ ಸರ್ಕಾರದಿಂದ ಒದಗಿಸಿರುವ ಅನುದಾನದ ವಿವರ ಈ ಕೆಳಗಿನಂತಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಹಂಚಿಕೆ</th><th>ಬಿಡುಗಡೆ</th><th>ವೆಚ್ಚ</th></tr>
<tr><td>2023-24</td><td>10000.00</td><td>10000.00</td><td>8887.69</td></tr>
<tr><td>2024-25</td><td>31369.99</td><td>31369.99</td><td>31150.10</td></tr>
<tr><td>2025-26</td><td>62500.00</td><td>62500.00</td><td>58688.56</td></tr>
</table>
<br>ಯುವನಿಧಿ ಯೋಜನೆಯಡಿ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಕೇಂದ್ರ ಕಚೇರಿಯಿಂದ ನೇರವಾಗಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಪಾವತಿಸಲಾಗುತ್ತಿದೆ. ಜಿಲ್ಲಾವಾರು ಫಲಾನುಭವಿಗಳ ಮತ್ತು ವೆಚ್ಚದ ವಿವರಗಳನ್ನು ಅನುಬಂಧ-2ರಲ್ಲಿ ನೀಡಿದೆ.<br><br><u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u><br><br>ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನ, ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು ಈ ಕೆಳಗಿನಂತಿದೆ.<br><br>(ರೂ. ಲಕ್ಷಗಳಲ್ಲಿ)
<table>
<tr><th>ಅವಧಿ</th><th>ಆಯವ್ಯಯ ನಿಗದಿ</th><th>ಅನುದಾನ ಬಿಡುಗಡೆ</th><th>ಖರ್ಚು</th></tr>
<tr><td>2022-23</td><td>25987.31</td><td>24953.84</td><td>24304.22</td></tr>
<tr><td>2023-24</td><td>25543.81</td><td>23118.27</td><td>19874.35</td></tr>
<tr><td>2024-25</td><td>21125.83</td><td>20311.75</td><td>18194.42</td></tr>
</table>
<br><u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br><u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)</u><br><br>ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಪ್ರತಿ ಯೋಜನೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರದಿಂದ ಬಿಡುಗಡೆಯಾದ ಮೊತ್ತದ ವಿವರವನ್ನು ಅನುಬಂಧ-3 ರಲ್ಲಿ ನೀಡಿದೆ.<br><br>ಜಿಲ್ಲಾವಾರು ಖರ್ಚಾಗಿರುವ ಮೊತ್ತದ ವಿವರವನ್ನು ಅನುಬಂಧ-4 ರಲ್ಲಿ ನೀಡಿದೆ.</td>
</tr>
</table>

**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

ಕಳೆದ 3 ಹಣಕಾಸು ವರ್ಷಗಳಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತದ ವಿವರ ಹಾಗೂ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ – 5 ರಲ್ಲಿ ನೀಡಿದೆ.

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)**

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ಕ್ಕೆ ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರದಿಂದ ರಾಜ್ಯವಾರು ಅನುದಾನ ಬಿಡುಗಡೆಯಾಗುತ್ತಿದ್ದು, ವಿವರ ಈ ಕೆಳಗಿನಂತಿದೆ.

| ವರ್ಷ | ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ಖರ್ಚಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 2023-24 | 500-00 | 500-00 | 500-00 |
| 2024-25 | 500-00 | 500-00 | 500-00 |
| 2025-26 | 500-00 | 500-00 | 500-00 |

(ಇ) ಮಂಜೂರಾದ ಅನುದಾನ ಸಂಪೂರ್ಣವಾಗಿ ಬಳಸಲಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು; ಅನುದಾನ ಲ್ಯಾಪ್ಸ್ ಆಗಿರುವುದೇ; ಆಗಿದ್ದಕ್ಕೆ ಎಷ್ಟು ಮೊತ್ತ ಲ್ಯಾಪ್ಸ್ ಆಗಿದೆ;

**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಅನುದಾನದ ಅಧ್ಯರ್ಪಣೆಯ ವಿವರ ಈ ಕೆಳಗಿನಂತಿದೆ :

| ಅವಧಿ | ಅನುದಾನ ಅಧ್ಯರ್ಪಣೆ ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 2022-23 | 649.62 |
| 2023-24 | 3243.92 |
| 2024-25 | 2117.33 |

ಮೇಲ್ಕಂಡ ಅನುದಾನದಲ್ಲಿ ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಂಡಂತೆ ಇತರ ಕಾರ್ಯಕ್ರಮ ಹಾಗೂ ಯೋಜನೆಗಳ ಅನುದಾನವು ಸಹ ಒಳಗೊಂಡಿದ್ದು, ಯೋಜನೆ / ಕಾರ್ಯಕ್ರಮಗಳ ಪ್ರಾರಂಭಿಕ ಹಂತದ ಹಿನ್ನಲೆಯಲ್ಲಿ ಸದರಿ ಅನುದಾನವು ಅಧ್ಯರ್ಪಣೆಗೊಂಡಿರುತ್ತದೆ.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

- ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಾಗೂ ಆರಂಭಿಕ ಶಿಲ್ಕು ಸೇರಿ ಲಭ್ಯವಿರುವ ಅನುದಾನದಡಿ

| | | |
|---|---|---|
| | | ಶೇ. 80 ಕ್ಕಿಂತ ಹೆಚ್ಚು ಅನುದಾನವನ್ನು ವೆಚ್ಚ ಭರಿಸಲಾಗುತ್ತದೆ.<br>• 2022-23 ಆರ್ಥಿಕ ವರ್ಷದಲ್ಲಿ ಉಳಿಕೆಯಾದ ಅನುದಾನ ರೂ.137.08 ಕೋಟಿಗಳನ್ನು 2023-24ನೇ ಸಾಲಿಗೆ ಆರಂಭಿಕ ಶಿಲ್ಕುಗಳಾಗಿ ಹಾಗೂ 2023-24ನೇ ಸಾಲಿನಲ್ಲಿ ಉಳಿಕೆಯಾದ ರೂ.246.00 ಕೋಟಿ ಅನುದಾನವನ್ನು 2024-25ನೇ ಸಾಲಿಗೆ ಆರಂಭಿಕ ಶಿಲ್ಕುಗಳಾಗಿ ಅನುದಾನವನ್ನು ವೆಚ್ಚ ಭರಿಸಲಾಗಿದೆ.<br>• ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ 2024-25 ನೇ ಸಾಲಿನಲ್ಲಿ ಅನುದಾನ ಬಳಕೆಗೆ SNA SPARSH ತಂತ್ರಾಂಶದ ಅನುಷ್ಠಾನಗೊಳಿಸಲಾಗಿರುವುದರಿಂದ ರಾಜ್ಯ ಹಾಗೂ ಜಿಲ್ಲಾ ಘಟಕಗಳಡಿ ಸದರಿ ತಂತ್ರಾಂಶದ ಅನುಷ್ಠಾನಕ್ಕೆ ಸಮಯ ತೆಗೆದುಕೊಂಡಿದ್ದರಿಂದ ಒಟ್ಟು ಲಭ್ಯವಿರುವ ಅನುದಾನದಲ್ಲಿ ಶೇ. 87.52 ಪ್ರಗತಿ ಸಾಧಿಸಲಾಗಿದೆ. ಎನ್.ಆರ್.ಎಲ್.ಎಮ್ ಕಾರ್ಯಕ್ರಮದಡಿ ಶೇ. 91.00 ರಷ್ಟು ಪ್ರಗತಿ ಸಾಧಿಸಿದ್ದು, ಕಾರ್ಯಕ್ರಮದಡಿ ಉಳಿಕೆಯಾದ ಅನುದಾನ ರೂ. 61.84 ಕೋಟಿ ಅನುದಾನ SNA Sparsh ತಂತ್ರಾಂಶದ ಕಾರಣ ಲ್ಯಾಪ್ಸ್ ಆಗಿರುತ್ತದೆ.<br>__ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)__<br>ಮಂಜೂರಾದ ಅನುದಾನ ಸಂಪೂರ್ಣವಾಗಿ ಬಳಸಲಾಗಿರುತ್ತದೆ. |
| (ಈ) | ಪ್ರತಿ ಯೋಜನೆಯಡಿ ತರಬೇತಿ ಪಡೆದವರ ಸಂಖ್ಯೆ; ಉದ್ಯೋಗ ಪಡೆದವರ ಸಂಖ್ಯೆ ಹಾಗೂ ಸ್ವಯಂ ಉದ್ಯಮ ಆರಂಭಿಸಿದವರ ಸಂಖ್ಯೆ ಎಷ್ಟು; ಅದರ ಯಶಸ್ಸಿನ ಪ್ರಮಾಣ ಎಷ್ಟು; | __ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-(ಕೆ.ಎಸ್.ಡಿ.ಸಿ)__<br>ವಿವರವನ್ನು ಅನುಬಂಧ -6 ಮತ್ತು 7 ರಲ್ಲಿ ನೀಡಿದೆ.<br>__ರಾಷ್ಟ್ರೀಯ ಜೀವನೋಪಾಯ ಅಭಿಯಾನ__<br>__ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)__<br>ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರ ಪತ್ರ ಸಂಖ್ಯೆ: K-12014(21)/1/2018-UPA-I-UD (E-9044566) ದಿನಾಂಕ: 03.04.2023 ರನ್ವಯ ಡೇ-ಎನ್‌ಯುಎಲ್‌ಎಂ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕವನ್ನು ಮುಕ್ತಾಯಗೊಳಿಸಿ ಆದೇಶಿಸಿರುತ್ತಾರೆ. ಆದ್ದರಿಂದ, ಪ್ರಸ್ತುತ ಡಿಜೆಎಮ್ಮೆ-ಎಸ್ ಯೋಜನೆಯಡಿ ಯಾವುದೇ ತರಬೇತಿಯನ್ನು ಆಯೋಜಿಸಿರುವುದಿಲ್ಲ.<br>__ರಾಷ್ಟ್ರೀಯ ಜೀವನೋಪಾಯ ಅಭಿಯಾನ__<br>__ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)__<br>• ಕಳೆದ 3 ವರ್ಷಗಳಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಮತ್ತು ಗ್ರಾಮೀಣ ಸ್ವ |

ಉದ್ಯೋಗ ತರಬೇತಿ ಕೇಂದ್ರ ಕಾರ್ಯಕ್ರಮದಡಿ 3 ವರ್ಷಗಳ ಪ್ರಗತಿ ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ವರ್ಷ | DDU-GKY ಕಾರ್ಯಕ್ರಮ | |
|---|---|---|---|
| | | ತರಬೇತಿಯ ಪ್ರಗತಿ | ಉದ್ಯೋಗ ಹೊಂದಿದವರ ಸಂಖ್ಯೆ |
| 1 | 2022-23 | 2542 | 1275 |
| 2 | 2023-24 | 2333 | 1467 |
| 3 | 2024-25 | 1588 | 1528 |
| ಒಟ್ಟು | | **6463** | **4270** |

| ಕ್ರ. ಸಂ | ವರ್ಷ | RSETI ಕಾರ್ಯಕ್ರಮ | |
|---|---|---|---|
| | | ತರಬೇತಿಯ ಪ್ರಗತಿ | ಉದ್ಯೋಗ ಹೊಂದಿದವರ ಸಂಖ್ಯೆ |
| 1 | 2022-23 | 19407 | 13881 |
| 2 | 2023-24 | 25613 | 19805 |
| 3 | 2024-25 | 31207 | 22929 |
| ಒಟ್ಟು | | **76227** | **56615** |

<u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)</u>

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ಉದ್ಯಮಶೀಲತಾ ತರಬೇತಿಗಳನ್ನು ಅನುಷ್ಠಾನಗೊಳಿಸಿ ಸದರಿ ತರಬೇತಿಯಲ್ಲಿ ಹಾಜರಾದ ಒಟ್ಟು 1505 ಅಭ್ಯರ್ಥಿಗಳು ಸ್ವಂತ ಉದ್ಯಮಗಳನ್ನು ಪ್ರಾರಂಭಿಸಿರುತ್ತಾರೆ. ವಿವರವು ಈ ಕೆಳಗಿನಂತಿದೆ.

| ವರ್ಷ | ಸ್ವಂತ ಉದ್ಯಮಗಳನ್ನು ಪ್ರಾರಂಭಿಸಿದ ಅಭ್ಯರ್ಥಿಗಳ ಸಂಖ್ಯೆ |
|---|---|
| 2022-23 | 607 |
| 2023-24 | 536 |
| 2024-25 | 362 |

(ಉ) ಸರ್ಕಾರವು ಯೋಜನೆಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಯಾವ ರೀತಿಯ ಮೇಲುಸ್ತುವಾರಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ; ತೃತೀಯ ಪಕ್ಷದ ಮೌಲ್ಯಮಾಪನ (Third

<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-(ಕೆ.ಎಸ್.ಡಿ.ಸಿ)</u>

ಸದರಿ ಯೋಜನೆಗಳ ಅನುಷ್ಠಾನದ ಕುರಿತಂತೆ ಸರ್ಕಾರದ ಆದೇಶದನ್ವಯ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದಿಂದ ಮೌಲ್ಯಮಾಪನ ಕೈಗೊಳ್ಳಲು ಕ್ರಮವಹಿಸಲಾಗಿರುತ್ತದೆ.

| | | |
|---|---|---|
| | Party Evaluation) ನಡೆಸಲಾಗಿದೆಯೇ; | **ರಾಷ್ಟ್ರೀಯ ಜೀವನೋಪಾಯ ಅಭಿಯಾನ**<br>**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**<br>• ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಡಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ಘಟಕಗಳನ್ನು ಸೃಜನೆಗೊಳಿಸಿದ್ದು, ಈ ಘಟಕಗಳಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯ ಕಾರ್ಯಕಾರಿ ಸಮಿತಿ ಹಾಗೂ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮತ್ತು ಮಾನ್ಯ ಇಲಾಖಾ ಸಚಿವರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.<br>• ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಯೋಜನಾ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಕಾರ್ಯಕ್ರಮ ಮೂಲಕ "ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಸ್ವ-ಸಹಾಯ ಗುಂಪುಗಳ ಸ್ಥಿತಿಗಳ ಅಧ್ಯಯನ ಕುರಿತು ತೃತಿಯಾ ಪಕ್ಷದ ಮೌಲ್ಯಮಾಪನ ನಡೆಸಲಾಗಿರುತ್ತದೆ". ಸದರಿ ವರದಿಯು ಡಿಸೆಂಬರ್-2021ರಲ್ಲಿ ಪ್ರಕಟವಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು (ಡಿಡಿಯು-ಜಿಕೆವೈ) ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ನವೆಂಬರ್ 2021 ರಲ್ಲಿ ಪ್ರಕಟವಾಗಿರುತ್ತದೆ.<br>**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)**<br>ತರಬೇತಿಗಳನ್ನು ಅನುಷ್ಠಾನಗೊಳಿಸಲು ಸಂಸ್ಥೆಯಿಂದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ತರಬೇತಿಗಳಿಗೆ ಮಾಡಲಾದ ಖರ್ಚು ವೆಚ್ಚಗಳಿಗೆ ಮೂರು ಹಂತಗಳಲ್ಲಿ ಲೆಕ್ಕ ಪರಿಶೋಧನೆಯಾಗುತ್ತದೆ. ತರಬೇತಿ ನೀಡಿದ ಅಭ್ಯರ್ಥಿಗಳಿಗೆ ಅನುಸರಣೆಯನ್ನು ಕೈಗೊಂಡು |

| | | |
|---|---|---|
| | | ಸಂಸ್ಥೆಯಡಿ ರಚಿಸಲಾದ ಪೋರ್ಟಲ್‌ಗಳಲ್ಲಿ ದಾಖಲಿಸಲಾಗುತ್ತದೆ. |
| (ಊ) | ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾದ ವ್ಯತ್ಯಾಸಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವ ಅಂಶಗಳೇನು; ಸಮಾನ ಅನುಷ್ಠಾನಕ್ಕಾಗಿ ಕೈಗೊಳ್ಳಲಿರುವ ಕ್ರಮಗಳೇನು; | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಯುವನಿಧಿ ಯೋಜನೆಗೆ ಗ್ರಾಮೀಣ ಮತ್ತು ನಗರ ಭಾಗಗಳ ಅಭ್ಯರ್ಥಿಗಳು ನೋಂದಾಯಿಸಿರುತ್ತಾರೆ.<br>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-(ಕೆ.ಎಸ್.ಡಿ.ಸಿ)**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಸರ್ಕಾರದ ಆದೇಶ ಹಾಗೂ ಯೋಜನೆಗಳ ಮಾರ್ಗಸೂಚಿಯಡಿ ಅನುಷ್ಠಾನಗೊಂಡಿರುವ ಯೋಜನೆಗಳು ರಾಜ್ಯಾದ್ಯಂತ ಅನುಷ್ಠಾನಗೊಳಿಸಿರುವ ಹಿನ್ನಲೆಯಲ್ಲಿ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಿರುವುದಿಲ್ಲ.<br>**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)**<br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದಿಂದ ಗ್ರಾಮೀಣ ಮತ್ತು ನಗರ ಭಾಗಗಳ ಅಭ್ಯರ್ಥಿಗಳಿಗೆ ಸಮಾನವಾಗಿ ಪ್ರಾಮುಖ್ಯತೆಯನ್ನು ನೀಡಿ ತರಬೇತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| (ಋ) | ಭವಿಷ್ಯದಲ್ಲಿ ಇಲಾಖೆಯ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹಾಗೂ ಯುವಕರಿಗೆ ಸುಸ್ಥಿರ ಜೀವನೋಪಾಯ ಕಲ್ಪಿಸಲು ಸರ್ಕಾರ ಯಾವ ಹೊಸ ನೀತಿ ರೂಪಿಸಲು ಕ್ರಮಗಳನ್ನು ಕೈಗೊಳ್ಳಲಿದೆ? | **ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-(ಕೆ.ಎಸ್.ಡಿ.ಸಿ)**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ನಿರುದ್ಯೋಗಿಗಳನ್ನು ಕೌಶಲ್ಯಾಭಿವೃದ್ಧಿಗೊಳಿಸಿ, ಉದ್ಯೋಗಕ್ಕಾಗಿ ಸಜ್ಜುಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. **ಕೌಶಲ್ಯ ನೀತಿ** : ಕೌಶಲ್ಯಾಭಿವೃದ್ಧಿಯ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಭಾಗಿದಾರರನ್ನು ಒಳಗೊಂಡಂತೆ ನೀತಿಯನ್ನು ರೂಪಿಸಲಾಗಿದೆ.<br>2. **ಸಿ.ಎಂ.ಕೆ.ಕೆ.ವೈ 2.0**: ಯೋಜನೆಯ ಪರಿಣಾಮಕಾರಿಯಾಗಿ ಹಾಗೂ ತ್ವರಿತವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಆಯವ್ಯಯ ಘೋಷಣೆಯಂತೆ ಕ್ರಮವಹಿಸಲಾಗುತ್ತಿದೆ.<br>3. Industry Linkage Cell ಮತ್ತು Future Skills: ಯುವಕರಿಗೆ ಭವಿಷ್ಯದ ಕೌಶಲ್ಯ (Future Skills) ತರಬೇತಿಗಳನ್ನು ಕೈಗಾರಿಕಾ ಆಧಾರಿತ ಬೇಡಿಕೆ ಅನುಸಾರ ನೀಡುವುದು ಹಾಗೂ ಉದ್ಯೋಗಾವಕಾಶ ಒದಗಿಸುವುದು.<br>4. **ಕರ್ನಾಟಕ ಸ್ಕಿಲ್ ಒಲಂಪಿಕ್ಸ್**: ಅಂತರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಹಾಗೂ ರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಪೂರಕವಾಗಿ ಕೌಶಲ್ಯ ಒಲಂಪಿಕ್ಸ್ ಮೂಲಕ ರಾಜ್ಯದ ಯುವ ಜನತೆಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು.<br>5. **ವಿದೇಶಿ ಭಾಷಾ ತರಬೇತಿ**: ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಉದ್ಯೋಗಾವಕಾಶಗಳನ್ನು ಪಡೆಯಲು ಜರ್ಮನ್, ಇಂಗ್ಲೀಷ್, ಸ್ಪ್ಯಾನಿಷ್ ಹಾಗೂ ಇತರ ಭಾಷೆಗಳಲ್ಲಿ ತರಬೇತಿ ನೀಡಲು ಕ್ರಮವಹಿಸಲಾಗುತ್ತಿರುತ್ತದೆ. |

| | | |
|---|---|---|
| | | 6. <u>ಕಲಿಕೆ ಜೊತೆ ಕೌಶಲ್ಯ</u>: ಪದವಿ ತರಗತಿಗಳಲ್ಲಿ ಕೌಶಲ್ಯ ಸುಧಾರಿತ ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮದಡಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 50 ಗಂಟೆಗಳ ಕೈಗಾರಿಕಾ ಆಧಾರಿತ ತರಬೇತಿ ನೀಡಲಾಗುತ್ತಿದೆ.<br>7. <u>ಉದ್ಯೋಗ ಮೇಳ</u>: ರಾಜ್ಯ ವಿವಿಧ ಜಿಲ್ಲೆಗಳಲ್ಲಿ ಉದ್ಯೋಗ ಮೇಳ ಆಯೋಜಿಸುವ ಮುಖೇನ ಒಂದೇ ವೇದಿಕೆಯಡಿ ಉದ್ಯೋಗದಾತರನ್ನು ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಟ್ಟುಗೂಡಿಸಿ, ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಕ್ರಮವಹಿಸಲಾಗಿದೆ.<br>8. <u>ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯ ತರಬೇತಿ ಕಾರ್ಯಕ್ರಮ</u>: ಪ್ರಸಕ್ತ ಸಾಲಿನ ಆಯವ್ಯಯ ಘೋಷಣೆಯಂತೆ ಅಳಿವಿನಂಚಿನಲ್ಲಿರುವ ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಲು ಅಗತ್ಯವಿರುವ ಟೂಲ್‌ಕಿಟ್‌ಗಳೊಂದಿಗೆ ಅಲ್ಪಾವಧಿ ತರಬೇತಿಯನ್ನು ನೀಡಲು ಕ್ರಮವಹಿಸಲಾಗಿದೆ.<br>9. **ಲಂಬಾಣಿ ಜನಾಂಗದ ಕಸೂತಿ ಕಲೆಯ ಕೌಶಲ್ಯ ತರಬೇತಿ ಕಾರ್ಯಕ್ರಮ**: ಪ್ರಸಕ್ತ ಸಾಲಿನ ಆಯವ್ಯಯ ಘೋಷಣೆಯಂತೆ ಲಂಬಾಣಿ ಜನಾಂಗದ ಕಸೂತಿ ಕಲೆಯ ಬಗ್ಗೆ ತರಬೇತಿಯನ್ನು ಕೌಶಲ್ಯ ತರಬೇತಿ ಕೇಂದ್ರಗಳ ಮುಖೇನ ಅನುಷ್ಠಾನಗೊಳಿಸಲಾಗಿದೆ.<br><u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-(ಸಿಡಾಕ್)</u><br>ಉದ್ಯಮಶೀಲತಾಭಿವೃದ್ಧಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಾವಲಂಬಿಯಾಗಲು ಬೆಂಬಲ ಸೇವೆಯನ್ನು ನೀಡಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 7 ಕೌಗುಪ್ರ 2026

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1323

ಅನುಬಂಧ -1

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (KSDC) :**

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (Karnataka Skill Development Corporation – KSDC) ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾಗಿದ್ದು, ಕರ್ನಾಟಕದ ಯುವಕರಿಗೆ ಉದ್ಯೋಗಕ್ಕೆ ಅಗತ್ಯವಾದ ವಿವಿಧ ಕೌಶಲ್ಯ ತರಬೇತಿಯನ್ನು ಉಚಿತವಾಗಿ ನೀಡುವ ಮುಖೇನ ಸ್ವಾವಲಂಬನೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

ಪ್ರಸ್ತುತ ನಿಗಮವು ಬೇಡಿಕೆ ಅನುಸಾರ ಕೈಗಾರಿಕೆ, ಖಾಸಗಿ ಕ್ಷೇತ್ರ, ಶಿಕ್ಷಣ ಸಂಸ್ಥೆಗಳು ಮತ್ತು ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

**ಮುಖ್ಯ ಉದ್ದೇಶಗಳು :**

1. ಯುವಕರ ಕೌಶಲ್ಯಾಭಿವೃದ್ಧಿ – ಉದ್ಯೋಗ ಪಡೆಯಲು ಅಗತ್ಯವಾದ ತಾಂತ್ರಿಕ, ವೃತ್ತಿಪರ ಕೌಶಲ್ಯಗಳನ್ನು ಕಲಿಸುವುದು.
2. ಉದ್ಯೋಗಾವಕಾಶ ವೃದ್ಧಿ – ತರಬೇತಿ ಪಡೆದ ಯುವಕರಿಗೆ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗ ಸಿಗುವಂತೆ ಸಹಾಯ ಮಾಡುವುದು.
3. ಕೈಗಾರಿಕಾ ಅವಶ್ಯಕತೆ ಪೂರೈಕೆ – ಕೈಗಾರಿಕೆಗಳಿಗೆ ಅಗತ್ಯವಾದ ನೈಪುಣ್ಯ ಹೊಂದಿದ ಮಾನವ ಸಂಪನ್ಮೂಲವನ್ನು ಒದಗಿಸುವುದು.

**ಪ್ರಮುಖ ಯೋಜನೆಗಳು / ಕಾರ್ಯಕ್ರಮಗಳು :**

- **ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ:**
  - **ಯುವನಿಧಿ ಪ್ಲಸ್ ಕಾರ್ಯಕ್ರಮ** : ಪ್ರಸ್ತುತ ಯುವನಿಧಿ ಯೋಜನೆಯಡಿ ನೋಂದಣಿಗೊಂಡಿರುವ ಫಲಾನುಭವಿಗಳಿಗೆ ಕೌಶಲ್ಯದೊಂದಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಸರ್ಕಾರಿ ಹಾಗೂ ಖಾಸಗಿ ತರಬೇತಿದಾರ ಸಂಸ್ಥೆಗಳ ಮೂಲಕ ತರಬೇತಿ ನೀಡುವುದು.
  - Industry Linkage Cell ರಡಿ ಯುವಕರಿಗೆ ಭವಿಷ್ಯದ ಕೌಶಲ್ಯ (Future Skills) ತರಬೇತಿ ಗಳನ್ನು ಕೈಗಾರಿಕಾ ಆಧಾರಿತ ಬೇಡಿಕೆ ಅನುಸಾರ ನೀಡುವುದು ಹಾಗೂ ಉದ್ಯೋಗಾವಕಾಶ ಒದಗಿಸುವುದು.
  - **ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮ** : ಪದವಿ ತರಗತಿಗಳಲ್ಲಿ ಕೌಶಲ್ಯ ಸುಧಾರಿಸಲು ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮದಡಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ 50 ಗಂಟೆಗಳ ಕೈಗಾರಿಕಾ ಆಧಾರಿತ ತರಬೇತಿ ನೀಡಲಾಗುತ್ತಿದೆ.
  - **ನನ್ನ ವೃತ್ತಿ ನನ್ನ ಆಯ್ಕೆ ಕಾರ್ಯಕ್ರಮ** : 8 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಮುಖೇನ ಭವಿಷ್ಯದ ಆಯ್ಕೆಯ ಕುರಿತು ಮಾರ್ಗದರ್ಶನ ನೀಡಲಾಗುವುದು.
  - **ನಲ್ ಜಲ್ ಮಿತ್ರ ಯೋಜನೆ** : ಗ್ರಾಮೀಣ ಭಾಗದ SHG ಗುಂಪಿನ ಮಹಿಳೆಯರಿಗೆ ಗ್ರಾಮೀಣ ಕುಡಿಯುವ ನೀರು ನಿರ್ವಹಣೆಯಡಿ Plumbing Job role ಅಡಿ ಟೂಲ್ ಕಿಟ್ ನೊಂದಿಗೆ ಕೌಶಲ್ಯಾಧಾರಿತ ತರಬೇತಿ ನೀಡುವುದು.
  - **ಅಂತರಾಷ್ಟ್ರೀಯ ವಲಸೆ ಕೇಂದ್ರ (IMC-K)** : ವಿದೇಶಗಳ ಉದ್ಯೋಗಾವಕಾಶಗಳನ್ನು ರಾಜ್ಯದ ಯುವ ಜನತೆಗೆ ಸುರಕ್ಷೆಯೊಂದಿಗೆ ಒದಗಿಸುವುದು ಹಾಗೂ ವಿವಿಧ ಭಾಷೆಗಳ ಕುರಿತು ತರಬೇತಿ ನೀಡಲಾಗುವುದು.
  - **ಉದ್ಯೋಗ ಮೇಳಗಳು** : ರಾಜ್ಯ, ಪ್ರಾದೇಶಿಕ, ಜಿಲ್ಲಾ ಉದ್ಯೋಗ ಮೇಳಗಳ ಮುಖೇನ ರಾಜ್ಯ ಯುವ ಜನತೆಗೆ ಉದ್ಯೋಗಾವಕಾಶ ಒದಗಿಸುವುದು.
  - **ಸ್ಕಿಲ್ ಸಮ್ಮಿಟ್** : ಕೈಗಾರಿಕೆ, ಶೈಕ್ಷಣಿಕ ಸಂಸ್ಥೆಗಳು, ಮಾನವ ಸಂಪನ್ಮೂಲ ಏಜೆನ್ಸಿಗಳು ಹಾಗೂ ಇತರೆ ಭಾಗಿದಾರ ಸಂಸ್ಥೆಗಳೊಂದಿಗೆ ಸಂವಹನ ಹಾಗೂ ಸಹಕಾರ ಏರ್ಪಡಿಸುವ ಕುರಿತಂತೆ ಸಮ್ಮೇಳನ.
  - **ಕೌಶಲ್ಯ ಒಲಂಪಿಕ್ಸ್** : ಅಂತರಾಷ್ಟ್ರೀಯ ಕೌಶಲ್ಯ ಸ್ಪರ್ಧೆ ಗೆ ಹಾಗೂ ರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಪೂರಕವಾಗಿ ಕೌಶಲ್ಯ ಒಲಂಪಿಕ್ಸ್ ಮೂಲಕ ರಾಜ್ಯದ ಯುವ ಜನತೆಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೇರೆಪಿಸುವುದು.

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1323

## ಅನುಬಂಧ-2

### ಯುವನಿಧಿ ಯೋಜನೆಯ ಅರ್ಹ ಫಲಾನುಭವಿಗಳ ಹಾಗೂ ವೆಚ್ಚದ ಜಿಲ್ಲಾವಾರು ವಿವರ

| ಕ್ರ.ಸಂ. | ಜಿಲ್ಲೆ | ಅರ್ಹ ಫಲಾನುಭವಿಗಳು | ಪಾವತಿಸಿರುವ ಒಟ್ಟು ಮೊತ್ತ |
|---|---|---|---|
| 1 | ಬಾಗಲಕೋಟೆ | 16,911 | 49,53,89,000 |
| 2 | ಬಳ್ಳಾರಿ | 8,888 | 25,20,86,000 |
| 3 | ಬೆಳಗಾವಿ | 34,169 | 96,72,84,500 |
| 4 | ಬೆಂಗಳೂರು ಗ್ರಾಮಾಂತರ | 3,252 | 9,54,09,000 |
| 5 | ಬೆಂಗಳೂರು ನಗರ | 15,961 | 45,53,03,500 |
| 6 | ಬೀದರ | 12,133 | 35,02,56,500 |
| 7 | ಚಾಮರಾಜನಗರ | 3,994 | 12,48,30,000 |
| 8 | ಚಿಕ್ಕಬಳ್ಳಾಪುರ | 4,574 | 13,14,00,000 |
| 9 | ಚಿಕ್ಕಮಗಳೂರು | 4,564 | 14,38,95,000 |
| 10 | ಚಿತ್ರದುರ್ಗ | 8,783 | 27,24,28,500 |
| 11 | ದಕ್ಷಿಣ ಕನ್ನಡ | 6,283 | 18,12,90,000 |
| 12 | ದಾವಣಗೆರೆ | 11,081 | 34,75,00,000 |
| 13 | ಧಾರವಾಡ | 8,977 | 26,05,99,500 |
| 14 | ಗದಗ | 6,072 | 18,69,61,500 |
| 15 | ಹಾಸನ | 8,187 | 24,46,41,000 |
| 16 | ಹಾವೇರಿ | 8,988 | 26,68,95,000 |
| 17 | ಕಲಬುರಗಿ | 21,944 | 66,74,40,500 |
| 18 | ಕೊಡಗು | 1,740 | 4,93,92,000 |
| 19 | ಕೋಲಾರ | 4,562 | 13,43,91,000 |
| 20 | ಕೊಪ್ಪಳ | 9,833 | 28,48,48,500 |
| 21 | ಮಂಡ್ಯ | 7,226 | 21,83,37,000 |
| 22 | ಮೈಸೂರು | 12,993 | 38,40,63,500 |
| 23 | ರಾಯಚೂರು | 17,922 | 56,24,87,000 |
| 24 | ರಾಮನಗರ | 3,799 | 11,22,48,000 |
| 25 | ಶಿವಮೊಗ್ಗ | 8,750 | 26,68,45,500 |
| 26 | ತುಮಕೂರು | 9,174 | 28,84,06,500 |
| 27 | ಉಡುಪಿ | 3,813 | 10,92,21,000 |
| 28 | ಉತ್ತರಕನ್ನಡ | 6,892 | 20,94,49,500 |
| 29 | ವಿಜಯನಗರ | 8,663 | 25,22,49,000 |
| 30 | ವಿಜಯಪುರ | 18,938 | 51,77,87,000 |
| 31 | ಯಾದಗಿರಿ | 9,201 | 29,13,15,000 |
| ಒಟ್ಟು | | 3,08,267 | 9,12,46,50,000 |

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-3

**DAY NULM District Wise Releases for the FY 2022-23**

| SL. NO | District | Released Amount | Expenditure |
|---|---|---|---|
| 1 | BAGALKOTE | 9349432 | 9349432 |
| 2 | BANGALORE RURAL | 4041247 | 4041247 |
| 3 | BANGALORE URBAN | 1759045 | 1759045 |
| 4 | BBMP | 101571508 | 101571508 |
| 5 | BELGAVI | 21496808 | 21496808 |
| 6 | BELLARY | 17010497 | 17010497 |
| 7 | BIDAR | 8117207 | 8117207 |
| 8 | CHAMRAJNAGAR | 6666392 | 6666392 |
| 9 | CHICKBALAPUR | 9072903 | 9072903 |
| 10 | CHICKMAGALORE | 6784164 | 6784164 |
| 11 | CHITRADURGA | 5598672 | 5598672 |
| 12 | DAKSHINA KANNADA | 9995398 | 9995398 |
| 13 | DAVANGERE | 12727519 | 12727519 |
| 14 | DHARWAD | 18666750 | 18666750 |
| 15 | GADAG | 4552065 | 4552065 |
| 16 | HASSAN | 12067617 | 12067617 |
| 17 | HAVERI | 9398950 | 9398950 |
| 18 | KALABURGI | 15748498 | 15748498 |
| 19 | KODAGU | 652029 | 652029 |
| 20 | KOLAR | 5447597 | 5447597 |
| 21 | KOPPAL | 12476683 | 12476683 |
| 22 | MANDYA | 7077829 | 7077829 |
| 23 | MYSORE | 9445495 | 9445495 |
| 24 | RAICHUR | 9839200 | 9839200 |
| 25 | RAMANAGAR | 7523539 | 7523539 |
| 26 | SHIMOGA | 21857003 | 21857003 |
| 27 | TUMKUR | 21115013 | 21115013 |
| 28 | UDUPI | 5595716 | 5595716 |
| 29 | UTTARAKANNADA | 3298902 | 3298902 |
| 30 | VIJAYANAGAR | 3395429 | 3395429 |
| 31 | VIJAYAPUR | 15639811 | 15639811 |
| 32 | YADAGIRI | 9106467 | 9106467 |
| | **Total** | **40,70,95,385.00** | **40,70,95,385.00** |

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1388

ಅನುಬಂಧ-4

| DAY NULM District Wise Releases for the FY 2023-24 | | | |
|---|---|---|---|
| SL. NO | District | Released Amount | Expenditure |
| 1 | BAGALKOTE | 4122981 | 4122981 |
| 2 | BANGALORE RURAL | 2236124 | 2236124 |
| 3 | BANGALORE URBAN | 1017919 | 1017919 |
| 4 | BBMP | 16494508 | 16494508 |
| 5 | BELGAVI | 5761840 | 5761840 |
| 6 | BELLARY | 10926360 | 10926360 |
| 7 | BIDAR | 5020879 | 5020879 |
| 8 | CHAMRAJNAGAR | 3369988 | 3369988 |
| 9 | CHICKBALAPUR | 2278500 | 2278500 |
| 10 | CHICKMAGALORE | 3099037 | 3099037 |
| 11 | CHITRADURGA | 2891560 | 2891560 |
| 12 | DAKSHINA KANNADA | 5676121 | 5676121 |
| 13 | DAVANGERE | 6247147 | 6247147 |
| 14 | DHARWAD | 6309816 | 6309816 |
| 15 | GADAG | 2714556 | 2714556 |
| 16 | HASSAN | 5586325 | 5586325 |
| 17 | HAVERI | 4891659 | 4891659 |
| 18 | KALABURGI | 12123309 | 12123309 |
| 19 | KODAGU | 791037 | 791037 |
| 20 | KOLAR | 2559208 | 2559208 |
| 21 | KOPPAL | 4355018 | 4355018 |
| 22 | MANDYA | 3893226 | 3893226 |
| 23 | MYSORE | 4347430 | 4347430 |
| 24 | RAICHUR | 8205207 | 8205207 |
| 25 | RAMANAGAR | 2913165 | 2913165 |
| 26 | SHIMOGA | 12697475 | 12697475 |
| 27 | TUMKUR | 6016161 | 6016161 |
| 28 | UDUPI | 2915475 | 2915475 |
| 29 | UTTARAKANNADA | 2340316 | 2340316 |
| 30 | VIJAYANAGAR | 4411001 | 4411001 |
| 31 | VIJAYAPUR | 4957273 | 4957273 |
| 32 | YADAGIRI | 6002122 | 6002122 |
| | **Total** | **16,71,72,743.00** | **16,71,72,743.00** |

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

<u>ಅನುಬಂಧ-5</u>

<u>ಕಳೆದ 3 ಹಣಕಾಸು ವರ್ಷಗಳಲ್ಲಿ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತದ ವಿವರ</u>

ರೂ. ಕೋಟಿಗಳಲ್ಲಿ

| ಕ್ರ. ಸಂ. | ಕಾರ್ಯಕ್ರಮ | 2022-23 | | | 2023-24 | | | 2024-25 | | |
|---|---|---|---|---|---|---|---|---|---|---|
| | | ಬಿಡುಗಡೆ ಯಾದ ಅನುದಾನ | ಒಟ್ಟು ಲಭ್ಯವಿರುವ ಅನುದಾನ* | ಭರಿಸಲಾದ ವೆಚ್ಚ | ಬಿಡುಗಡೆ ಯಾದ ಅನುದಾನ | ಒಟ್ಟು ಲಭ್ಯವಿರುವ ಅನುದಾನ* | ಭರಿಸಲಾದ ವೆಚ್ಚ | ಬಿಡುಗಡೆ ಯಾದ ಅನುದಾನ | ಒಟ್ಟು ಲಭ್ಯವಿರುವ ಅನುದಾನ* | ಭರಿಸಲಾದ ವೆಚ್ಚ |
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM) | 325.86 | 498.16 | 446.33 | 678.90 | 730.72 | 554.67 | 497.88 | 673.93 | 612.09 |
| 2 | ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY) | 2.36 | 78.80 | 16.59 | 0.00 | 62.21 | 28.18 | 0.37 | 34.40 | 8.15 |
| 3 | ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ ಯೋಜನೆ (RSETI) | 20.17 | 23.45 | 22.67 | 22.65 | 23.44 | 20.44 | 11.09 | 14.09 | 8.29 |
| 4 | ಆರಂಭಿಕ ಗ್ರಾಮೀಣ ಉದ್ಯಮ ಕಾರ್ಯಕ್ರಮ (SVEP) | 1.64 | 4.80 | 2.84 | 13.01 | 14.97 | 7.73 | 0.00 | 7.25 | 5.75 |
| 5 | ಮಹಿಳಾ ಸಶಕ್ತೀಕರಣ ಪರಿಯೋಜನಾ- ಸಮಗ್ರ ಕೃಷಿ ಸಮೂಹ (MKSP-IFC) | 0 | 0 | 0 | 16.00 | 16.00 | 0.00 | 0.00 | 16.00 | 16.00 |
| 6 | ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (NRETP) | 35.52 | 47.43 | 27.126. | 19.54 | 39.85 | 30.17 | 12.20 | 21.87 | 21.49 |
| ಒಟ್ಟು | | 385.55 | 652.64 | 488.43 | 750.1 | 887.19 | 641.19 | 521.54 | 767.54 | 671.77 |

| ಎನ್‌ಆರ್‌ಎಲ್‌ಎಂ ಬಿಡುಗಡೆ ಮತ್ತು ವೆಚ್ಚದ ವಿವರ | | | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟಾರೆ ಅನುದಾನ | ಒಟ್ಟು ವೆಚ್ಚ | ಒಟ್ಟಾರೆ ಅನುದಾನ | ಒಟ್ಟು ವೆಚ್ಚ | ಒಟ್ಟಾರೆ ಅನುದಾನ | ಒಟ್ಟು ವೆಚ್ಚ |
| 1 | ಬಾಗಲಕೋಟೆ | 3111.09 | 2043.09 | 1020.25 | 985.37 | 892.63 | 859.20 |
| 2 | ಬೆಂಗಳೂರು ಗ್ರಾಮಾಂತರ | 1067.01 | 812.91 | 477.67 | 428.07 | 1426.85 | 1426.85 |
| 3 | ಬೆಂಗಳೂರು ನಗರ | 1334.47 | 1058.05 | 498.52 | 402.58 | 734.16 | 670.40 |
| 4 | ಬೆಳಗಾವಿ | 2860.17 | 1738.09 | 10479.18 | 10123.69 | 5209.31 | 5143.95 |
| 5 | ಬಳ್ಳಾರಿ | 1467.68 | 1320.54 | 1469.69 | 1422.05 | 1607.94 | 1521.85 |
| 6 | ಬೀದರ್ | 1723.95 | 1121.63 | 2934.80 | 2906.36 | 2898.40 | 2887.90 |
| 7 | ವಿಜಯಪುರ | 1802.86 | 1306.05 | 1416.38 | 1303.47 | 1573.58 | 1426.39 |
| 8 | ಚಾಮರಾಜನಗರ | 900.11 | 544.79 | 982.67 | 925.70 | 1271.72 | 1259.97 |
| 9 | ಚಿಕ್ಕಬಳ್ಳಾಪುರ | 1851.32 | 1325.17 | 1291.52 | 1211.00 | 2088.52 | 1977.72 |
| 10 | ಚಿಕ್ಕಮಗಳೂರು | 3813.96 | 3425.60 | 1672.82 | 1611.98 | 2425.35 | 2394.01 |
| 11 | ಚಿತ್ರದುರ್ಗ | 3772.60 | 2584.60 | 782.25 | 743.93 | 2473.51 | 2451.39 |
| 12 | ದಕ್ಷಿಣ ಕನ್ನಡ | 2692.01 | 2259.77 | 1562.77 | 1463.21 | 1467.38 | 1425.70 |
| 13 | ದಾವಣಗೆರೆ | 2594.44 | 2063.80 | 1068.51 | 1027.36 | 1253.97 | 1159.47 |
| 14 | ಧಾರವಾಡ | 1297.02 | 956.00 | 966.16 | 908.98 | 1866.94 | 1730.84 |
| 15 | ಕಲಬುರ್ಗಿ | 3402.54 | 2514.24 | 3003.65 | 2889.50 | 2036.68 | 1973.81 |
| 16 | ಗದಗ | 436.75 | 217.15 | 602.13 | 526.11 | 1998.84 | 1954.27 |
| 17 | ಹಾಸನ | 1610.19 | 1170.10 | 1429.98 | 1337.19 | 972.61 | 865.83 |
| 18 | ಹಾವೇರಿ | 1951.35 | 1458.88 | 1020.30 | 861.11 | 4297.19 | 4210.98 |
| 19 | ಕೊಡಗು | 1384.61 | 1111.97 | 842.39 | 801.84 | 366.80 | 309.16 |
| 20 | ಕೋಲಾರ | 2916.18 | 2539.96 | 804.72 | 704.61 | 2396.78 | 2305.34 |
| 21 | ಕೊಪ್ಪಳ | 843.01 | 718.90 | 2121.28 | 2046.76 | 806.38 | 705.71 |
| 22 | ಮಂಡ್ಯ | 1062.90 | 367.54 | 1992.73 | 1966.60 | 2110.46 | 2028.88 |
| 23 | ಮೈಸೂರು | 1222.95 | 430.06 | 1163.84 | 1078.95 | 2235.38 | 2084.27 |
| 24 | ರಾಯಚೂರು | 1950.31 | 1050.90 | 2702.74 | 2655.55 | 2136.65 | 2113.53 |
| 25 | ಬೆಂಗಳೂರು ದಕ್ಷಿಣ | 942.64 | 461.20 | 949.40 | 794.38 | 824.59 | 779.93 |
| 26 | ಶಿವಮೊಗ್ಗ | 1747.83 | 1211.75 | 1232.45 | 1180.14 | 3614.53 | 3571.95 |
| 27 | ತುಮಕೂರು | 2107.95 | 925.36 | 2381.02 | 1946.75 | 4177.18 | 3707.85 |
| 28 | ಉಡುಪಿ | 4204.72 | 3834.37 | 1085.05 | 1044.53 | 2613.22 | 2524.18 |
| 29 | ಉತ್ತರ ಕನ್ನಡ | 1124.27 | 663.31 | 1408.06 | 1311.88 | 970.55 | 848.94 |
| 30 | ಯಾದಗಿರಿ | 1147.66 | 969.19 | 1427.55 | 1353.82 | 1154.94 | 1136.22 |
| 31 | ವಿಜಯನಗರ | 900.65 | 398.51 | 23 50.99 | 2210.50 | 2056.62 | 1876.35 |
| | ಒಟ್ಟು | 59245.32 | 42603.59 | 53141.48 | 50173.99 | 61959.28 | 59332.85 |

<u>ಕಳೆದ 3 ಹಣಕಾಸು ವರ್ಷಗಳಲ್ಲಿ ಜಿಲ್ಲಾವಾರು ಮಾಹಿತಿಯ ವಿವರ</u>

ರೂ.ಲಕ್ಷಗಳಲ್ಲಿ

| ಡಿಡಿಯು-ಜಿಕೆಮ್ಮೆ ರೂ.ಲಕ್ಷಗಳಲ್ಲಿ | | | | | | | |
|---|---|---|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | 2022-23 | | 2023-24 | | 2024-25 | |
| | | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ |
| 1 | ಬಾಗಲಕೋಟೆ | 5.58 | 0.00 | 14.19 | 11.62 | 8.18 | 3.92 |
| 2 | ಬೆಂಗಳೂರು ಗ್ರಾ | 4.38 | 0.00 | 6.35 | 3.11 | 10.97 | 1.75 |
| 3 | ಬೆಂಗಳೂರುನಗರ | 10.36 | 0.00 | 8.78 | 5.66 | 6.97 | 1.43 |
| 4 | ಬೆಳಗಾವಿ | 9.38 | 2.39 | 13.84 | 8.10 | 25.35 | 3.54 |
| 5 | ಬಳ್ಳಾರಿ | 5.44 | 1.64 | 6.05 | 4.45 | 7.25 | 1.71 |
| 6 | ಬೀದರ್ | 4.98 | 0.00 | 13.23 | 13.10 | 8.72 | 2.87 |
| 7 | ವಿಜಯಪುರ | 10.91 | 1.21 | 5.04 | 5.03 | 9.00 | 1.38 |
| 8 | ಚಾಮರಾಜನಗರ | 6.41 | 1.83 | 11.12 | 3.30 | 3.34 | 1.64 |
| 9 | ಚಿಕ್ಕಬಳ್ಳಾಪುರ | 5.58 | 0.00 | 10.23 | 3.59 | 11.70 | 5.38 |
| 10 | ಚಿಕ್ಕಮಗಳೂರು | 6.18 | 0.47 | 22.38 | 16.98 | 14.16 | 7.78 |
| 11 | ಚಿತ್ರದುರ್ಗ | 5.58 | 0.61 | 19.56 | 11.78 | 12.60 | 9.87 |
| 12 | ದಕ್ಷಿಣಕನ್ನಡ | 4.98 | 0.00 | 17.84 | 14.81 | 10.20 | 5.75 |
| 13 | ದಾವಣಗೆರೆ | 4.98 | 0.67 | 17.06 | 16.97 | 10.55 | 4.37 |
| 14 | ಧಾರವಾಡ | 4.98 | 0.00 | 4.73 | 0.00 | 9.86 | 0.00 |
| 15 | ಗದಗ | 6.18 | 0.00 | 23.36 | 17.72 | 3.03 | 2.38 |
| 16 | ಕಲಬುರಗಿ | 4.98 | 3.31 | 5.82 | 5.81 | 13.52 | 6.58 |
| 17 | ಹಾಸನ | 6.78 | 0.00 | 25.29 | 19.83 | 11.68 | 11.04 |
| 18 | ಹಾವೇರಿ | 6.18 | 0.00 | 4.41 | 3.87 | 10.26 | 2.07 |
| 19 | ಕೊಡಗು | 4.32 | 1.24 | 9.41 | 4.74 | 7.42 | 1.46 |
| 20 | ಕೋಲಾರ | 4.98 | 0.00 | 0.00 | 0.00 | 0 | 0 |
| 21 | ಕೊಪ್ಪಳ | 6.27 | 1.87 | 0.00 | 0.00 | 1.30 | 0.00 |

| | | | | | | | |
|---|---|---|---|---|---|---|---|
| 22 | ಮಂಡ್ಯ | 8.54 | 0.00 | 7.52 | 5.54 | 11.15 | 2.22 |
| 23 | ಮೈಸೂರು | 6.18 | 0.00 | 16.81 | 4.67 | 5.04 | 1.47 |
| 24 | ರಾಯಚೂರು | 4.98 | 0.00 | 13.52 | 11.50 | 13.15 | 6.34 |
| 25 | ಬೆಂಗಳೂರು ದಕ್ಷಿಣ | 4.38 | 0.00 | 15.12 | 11.73 | 9.66 | 3.55 |
| 26 | ಶಿವಮೊಗ್ಗ | 7.35 | 0.00 | 3.32 | 3.28 | 8.18 | 2.61 |
| 27 | ತುಮಕೂರು | 7.98 | 0.00 | 4.75 | 3.92 | 18.19 | 1.25 |
| 28 | ಉಡುಪಿ | 3.78 | 0.00 | 12.14 | 9.43 | 13.15 | 6.34 |
| 29 | ಉತ್ತರಕನ್ನಡ | 8.58 | 0.00 | 16.05 | 7.44 | 19.88 | 2.91 |
| 30 | ಯಾದಗಿರಿ | 3.78 | 0.00 | 13.86 | 12.55 | 3.69 | 0.02 |
| 31 | ವಿಜಯನಗರ | 4.98 | 0.00 | 12.16 | 8.86 | 8.34 | 0.00 |
| ಜಿಲ್ಲಾವೆಚ್ಚ | | 189.83 | 15.24 | 353.94 | 249.39 | 300.33 | 100.19 |
| SMMUವೆಚ್ಚ | | 68.57 | 68.57 | 1684.04 | 1684.04 | 70.59 | 70.59 |
| PIAವೆಚ್ಚ | | 1700.11 | 1575.19 | 884.58 | 884.58 | 644.27 | 644.27 |
| ಒಟ್ಟು | | 1958.51 | 1659.00 | 2922.55 | 2818.00 | 1015.19 | 815.05 |

ರೂ.ಲಕ್ಷಗಳಲ್ಲಿ

| ಎನ್‌ಆರ್‌ಇಟಿಪಿ | | | | | |
|---|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | 2023-24 | | 2024-25 | |
| | | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ |
| 1 | ಬಾಗಲಕೋಟೆ | 12.75 | 12.75 | 4.25 | 4.25 |
| 2 | ಬೆಂಗಳೂರು ಗ್ರಾ | 4.50 | 4.50 | 1.50 | 1.50 |
| 3 | ಬೆಳಗಾವಿ | 12.00 | 12.00 | 4.00 | 4.00 |
| 4 | ಬಳ್ಳಾರಿ | 12.75 | 12.75 | 4.25 | 4.25 |
| 5 | ಬೀದರ್ | 2.25 | 2.25 | 0.75 | 0.75 |
| 6 | ವಿಜಯಪುರ | 9.00 | 9.00 | 3.00 | 3.00 |
| 7 | ಚಿಕ್ಕಬಳ್ಳಾಪುರ | 9.75 | 9.75 | 3.25 | 3.25 |
| 8 | ಚಿಕ್ಕಮಗಳೂರು | 8.25 | 8.25 | 2.75 | 2.75 |
| 9 | ಚಿತ್ರದುರ್ಗ | 6.00 | 6.00 | 2.00 | 2.00 |
| 10 | ದಕ್ಷಿಣ ಕನ್ನಡ | 2.25 | 2.25 | 0.75 | 0.75 |
| 11 | ದಾವಣಗೆರೆ | 28.13 | 18.75 | 9.38 | 9.38 |
| 12 | ಧಾರವಾಡ | 17.63 | 17.63 | 5.88 | 5.88 |
| 13 | ಕಲಬುರ್ಗಿ | 22.50 | 22.50 | 7.50 | 7.50 |
| 14 | ಗದಗ | 714.78 | 671.38 | 457.02 | 457.02 |
| 15 | ಹಾಸನ | 6.00 | 6.00 | 2.00 | 2.00 |
| 16 | ಹಾವೇರಿ | 15.00 | 12.75 | 5.00 | 4.25 |
| 17 | ಕೋಲಾರ | 6.00 | 6.00 | 2.00 | 2.00 |
| 18 | ಕೊಪ್ಪಳ | 10.88 | 10.88 | 3.63 | 3.63 |
| 19 | ಮಂಡ್ಯ | 6.38 | 6.38 | 2.13 | 2.13 |
| 20 | ಮೈಸೂರು | 11.25 | 0.00 | 11.25 | 10.00 |
| 21 | ಬೆಂಗಳೂರು ದಕ್ಷಿಣ | 6.75 | 4.50 | 2.25 | 1.50 |
| 22 | ಶಿವಮೊಗ್ಗ | 22.50 | 22.50 | 7.50 | 7.50 |
| 23 | ತುಮಕೂರು | 950.18 | 914.36 | 633.93 | 616.07 |
| 24 | ಉಡುಪಿ | 15.75 | 15.75 | 5.25 | 5.25 |
| 25 | ಉತ್ತರ ಕನ್ನಡ | 509.07 | 501.72 | 595.94 | 583.33 |
| 26 | ಎಸ್‌ಎಂಎಂಯು | 706.41 | 706.41 | 405.07 | 405.07 |
| | ಒಟ್ಟು | 3128.69 | 3017.00 | 2182.21 | 2149.00 |

| ಎಂಕೆಪಿಸಿ | | | |
|---|---|---|---|
| | | | ರೂ.ಲಕ್ಷಗಳಲ್ಲಿ |
| ಕ್ರ. ಸಂ | ಜಿಲ್ಲೆಯ ಹೆಸರು | 2024-25 | |
| | | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ |
| 1 | ಬಾಗಲಕೋಟೆ | 75.00 | 75.00 |
| 2 | ಬಳ್ಳಾರಿ | 30.00 | 30.00 |
| 3 | ಬೆಳಗಾವಿ | 90.00 | 90.00 |
| 4 | ಬೆಂಗಳೂರು ಗ್ರಾ | 30.00 | 30.00 |
| 5 | ಬೀದರ್ | 60.00 | 60.00 |
| 6 | ಚಾಮರಾಜನಗರ | 45.00 | 45.00 |
| 7 | ಚಿಕ್ಕಬಳ್ಳಾಪುರ | 60.00 | 60.00 |
| 8 | ಚಿಕ್ಕಮಗಳೂರು | 90.00 | 90.00 |
| 9 | ಚಿತ್ರದುರ್ಗ | 45.00 | 45.00 |
| 10 | ದಕ್ಷಿಣ ಕನ್ನಡ | 45.00 | 45.00 |
| 11 | ದಾವಣಗೆರೆ | 45.00 | 45.00 |
| 12 | ಧಾರವಾಡ | 45.00 | 45.00 |
| 13 | ಗದಗ | 15.00 | 15.00 |
| 14 | ಹಾಸನ | 60.00 | 60.00 |
| 15 | ಹಾವೇರಿ | 105.00 | 105.00 |
| 16 | ಕಲ್ಬುರ್ಗಿ | 75.00 | 75.00 |
| 17 | ಕೊಡಗು | 30.00 | 30.00 |
| 18 | ಕೋಲಾರ | 45.00 | 45.00 |
| 19 | ಕೊಪ್ಪಳ | 60.00 | 60.00 |
| 20 | ಮಂಡ್ಯ | 60.00 | 60.00 |
| 21 | ಮೈಸೂರು | 45.00 | 45.00 |
| 22 | ರಾಯಚೂರು | 45.00 | 45.00 |
| 23 | ಬೆಂಗಳೂರು ದಕ್ಷಿಣ | 30.00 | 30.00 |
| 24 | ಶಿವಮೊಗ್ಗ | 30.00 | 30.00 |
| 25 | ತುಮಕೂರು | 30.00 | 30.00 |
| 26 | ಉಡುಪಿ | 45.00 | 45.00 |
| 27 | ಉತ್ತರ ಕನ್ನಡ | 75.00 | 75.00 |
| 28 | ವಿಜಯನಗರ | 45.00 | 45.00 |
| 29 | ವಿಜಯಪುರ | 90.00 | 90.00 |
| 30 | ಯಾದಗಿರಿ | 45.00 | 45.00 |
| | SMMUವೆಚ್ಚ | 10.00 | 10.00 |
| Total | | 1600.00 | 1,600.00 |

| ಎಸ್‌ವಿಇಪಿ ರೂ.ಲಕ್ಷಗಳಲ್ಲಿ | | | | | | | |
|---|---|---|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | 2022-23 | | 2023-24 | | 2024-25 | |
| | | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ | ಒಟ್ಟು ಅನುದಾನ ಬಿಡುಗಡೆ | ಒಟ್ಟು ವೆಚ್ಚ |
| 1 | ಬೆಂಗಳೂರು ಗ್ರಾಮಾಂತರ | 1.00 | 0.71 | 151.48 | 151.46 | 134.28 | 131.09 |
| 2 | ಬೆಂಗಳೂರು ದಕ್ಷಿಣ | 1.00 | 0.00 | 161.83 | 158.67 | 136.33 | 133.58 |
| 3 | ಕೊಪ್ಪಳ | 74.04 | 73.19 | 103.84 | 103.30 | 119.89 | 117.54 |
| 4 | ಮೈಸೂರು | 74.36 | 74.17 | 103.84 | 103.65 | 0.00 | 0.00 |
| 5 | ಬೆಂಗಳೂರು ನಗರ | 0 | 0 | 4.83 | 4.83 | 0.00 | 0.00 |
| 6 | ಬೆಳಗಾವಿ | 0 | 0 | 9.66 | 9.66 | 0.00 | 0.00 |
| 7 | ಬೀದರ್ | 0 | 0 | 9.66 | 9.66 | 0.00 | 0.00 |
| 8 | ಚಿತ್ರದುರ್ಗ | 0 | 0 | 9.66 | 9.66 | 0.00 | 0.00 |
| 9 | ದಾವಣಗೆರೆ | 0 | 0 | 4.83 | - | 0.00 | 0.00 |
| 10 | ಕಲಬುರ್ಗಿ | 0 | 0 | 4.83 | 4.83 | 0.00 | 0.00 |
| 11 | ಹಾಸನ | 0 | 0 | 9.66 | 9.66 | 0.00 | 0.00 |
| 12 | ಹಾವೇರಿ | 0 | 0 | 14.49 | 14.49 | 0.00 | 0.00 |
| 13 | ರಾಯಚೂರು | 0 | 0 | 9.66 | 9.66 | 0.00 | 0.00 |
| 14 | ಉತ್ತರ ಕನ್ನಡ | 0 | 0 | 9.66 | 9.66 | 0.00 | 0.00 |
| ಒಟ್ಟು | | 150.40 | 148.08 | 607.93 | 599.20 | 390.50 | 382.20 |
| ಎಸ್‌ಎಂಎಂಯು | | 135.92 | 135.92 | 173.80 | 173.80 | 192.80 | 192.80 |
| ಒಟ್ಟಾರೆ ಮೊತ್ತ | | 286.32 | 284.00 | 781.74 | 773.00 | 583.30 | 575.00 |

Umadevi. G

(ಜಿ.ಉಮಾದೇವಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1323

ಅನುಬಂಧ - 6

- ಫಲಾನುಭವಿಗಳ ಸಂಖ್ಯೆ :

NO. OF CANDIDATES TRAINED UNDER CMKKY(Excluding of NAIJAL AND KJK Program

| SL.NO. | DISTRICT NAME | 2022-23 | 2023-24 | 2024-25 | Grand Total |
|---|---|---|---|---|---|
| 1 | BAGALAKOTE | 1944 | 480 | 441 | 2865 |
| 2 | BALLARI | 1670 | 360 | 495 | 2525 |
| 3 | BELAGAVI | 3649 | 1396 | 789 | 5834 |
| 4 | BENGALURU RURAL | 402 | 175 | 112 | 689 |
| 5 | BENGALURU URBAN | 5192 | 2315 | 639 | 8146 |
| 6 | BIDAR | 2302 | 377 | 215 | 2894 |
| 7 | CHAMARAJANAGARA | 911 | 559 | 255 | 1725 |
| 8 | CHIKBALLAPUR | 1098 | 441 | 355 | 1894 |
| 9 | CHIKMAGALURU | 1333 | 135 | 239 | 1707 |
| 10 | CHITRADURGA | 1650 | 502 | 290 | 2442 |
| 11 | DAKSHINA KANNADA | 1686 | 1767 | 527 | 3980 |
| 12 | DAVANGERE | 2195 | 412 | 263 | 2870 |
| 13 | DHARWAD | 5624 | 1980 | 707 | 8311 |
| 14 | GADAG | 3596 | 221 | 175 | 3992 |
| 15 | HASSAN | 2464 | 1084 | 389 | 3937 |
| 16 | HAVERI | 975 | 639 | 380 | 1994 |
| 17 | KALABURGI | 5283 | 2093 | 612 | 7988 |
| 18 | KODAGU | 102 | 12 | 92 | 206 |
| 19 | KOLAR | 1059 | 727 | 423 | 2209 |
| 20 | KOPPAL | 3843 | 719 | 582 | 5144 |
| 21 | MANDYA | 1962 | 422 | 417 | 2801 |
| 22 | MYSURU | 5432 | 1763 | 1105 | 8300 |
| 23 | RAICHURU | 1899 | 114 | 219 | 2232 |
| 24 | RAMANAGARA | 636 | 171 | 45 | 852 |
| 25 | SHIVAMOGA | 2965 | 557 | 216 | 3738 |
| 26 | TUMKURU | 1304 | 650 | 418 | 2372 |
| 27 | UDUPI | 988 | 353 | 287 | 1628 |
| 28 | UTTAR KANNADA | 748 | 598 | 444 | 1790 |
| 29 | VIJAYANAGAR | 135 | 266 | 382 | 783 |
| 30 | VIJAYAPURA | 3986 | 208 | 256 | 4450 |
| 31 | YADGIR | 1961 | 105 | 153 | 2219 |
| | Grand Total | 68994 | 21601 | 11922 | 102517 |

Umadevi.G

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1323

ಅನುಬಂಧ -7

ಉದ್ಯೋಗಾವಕಾಶದ ವಿವರ :

| DETAILS OF DISTRICT WISE NO. OF CANDIDATES PLACED UNDER CMKKY(Excluding of KJK and NAIJAL) | | | | | |
|---|---|---|---|---|---|
| SL.NO. | DISTRICT NAME | 2022-23 | 2023-24 | 2024-25 | Grand Total |
| 1 | BAGALAKOTE | 474 | 0 | 0 | 474 |
| 2 | BALLARI | 127 | 0 | 0 | 127 |
| 3 | BELAGAVI | 418 | 0 | 0 | 418 |
| 4 | BENGALURU RURAL | 35 | 0 | 0 | 35 |
| 5 | BENGALURU URBAN | 265 | 0 | 2 | 267 |
| 6 | BIDAR | 376 | 0 | 0 | 376 |
| 7 | CHAMARAJANAGARA | 178 | 0 | 0 | 178 |
| 8 | CHIKBALLAPUR | 426 | 0 | 5 | 431 |
| 9 | CHIKMAGALURU | 442 | 0 | 0 | 442 |
| 10 | CHITRADURGA | 480 | 0 | 0 | 480 |
| 11 | DAKSHINA KANNADA | 0 | 0 | 5 | 5 |
| 12 | DAVANGERE | 78 | 0 | 0 | 78 |
| 13 | DHARWAD | 786 | 18 | 0 | 804 |
| 14 | GADAG | 1216 | 0 | 0 | 1216 |
| 15 | HASSAN | 191 | 0 | 0 | 191 |
| 16 | HAVERI | 179 | 40 | 0 | 219 |
| 17 | KALABURGI | 1290 | 0 | 0 | 1290 |
| 18 | KODAGU | 28 | 0 | 0 | 28 |
| 19 | KOLAR | 303 | 0 | 0 | 303 |
| 20 | KOPPAL | 483 | 0 | 0 | 483 |
| 21 | MANDYA | 468 | 0 | 0 | 468 |
| 22 | MYSURU | 2263 | 0 | 0 | 2263 |
| 23 | RAICHURU | 633 | 0 | 0 | 633 |
| 24 | RAMANAGARA | 54 | 0 | 0 | 54 |
| 25 | SHIVAMOGA | 739 | 4 | 0 | 743 |
| 26 | TUMKURU | 552 | 0 | 0 | 552 |
| 27 | UDUPI | 121 | 0 | 11 | 132 |
| 28 | UTTAR KANNADA | 1 | 0 | 0 | 1 |
| 29 | VIJAYAPURA | 1965 | 0 | 0 | 1965 |
| 30 | YADGIR | 177 | 0 | 0 | 177 |
| Grand Total | | 14748 | 62 | 23 | 14833 |

Umadevi. G.

(ಜಿ. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ